KATK010033472020

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ.205/2020**

ಪ್ರಾ.ಸಾ. : **6**

ದೋ.ಸಾ. : **7**

ದಿ.**18.03.2026**

| | |
|---|---|
| ಹೆಸರು | : ರಾಮಕೃಷ್ಣಯ್ಯ |
| ತಂದೆಯ ಹೆಸರು | : ಲೇಟ್ ರಾಮಭೀಮಯ್ಯ |
| ವಯಸ್ಸು | : **50** ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸಸ್ಥಳ | : ಸ್ವಾಂದೇನಹಳ್ಳಿ |

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

1. ನನಗೆ ನಮ್ಮ ಊರಿನ ಚಾ ಸಾ 6 ಗಂಗಾಧರಯ್ಯ ಗೊತ್ತಿದೆ. ಕೊರೋನಾ ಸಮಯದಲ್ಲಿ ನಾನು ನ್ಯಾಯಾಲಯಕ್ಕೆ ಬಂದಿದ್ದೆನು.

(ಈ ಹಂತದಲ್ಲಿ ಸಾಕ್ಷಿಯ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಸಾಕ್ಷಿಯನ್ನು ಪುನಃ ದಿನಾಂಕ.**29.04.2026** ರಂದು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

2. ಸುಮಾರು 5 ವರ್ಷಗಳ ಹಿಂದೆ ನಾನು ಕೊರೋನಾ ಸಮಯದಲ್ಲಿ ಕೋರ್ಟಿಗೆ ಬಂದಿದ್ದೆನು. ನಾನು ಮತ್ತು ಗಂಗಾಧರಯ್ಯ ಜೊತೆಗೆ ನ್ಯಾಯಾಲಯಕ್ಕೆ ಬಂದಿದ್ದೆವು. ತುಮಕೂರು ಗ್ರಾಮಾಂತರ ಪೋಲೀಸ್ ಠಾಣೆಯ ಪಿಎಸ್ಐ ರವರು ಗಾಂಜಾ ಪ್ರಕರಣದಲ್ಲಿ ಸಾಕ್ಷಿ ಹಾಕಬೇಕೆಂದು ಹೇಳಿದರು. ತುಮಕೂರು 1 ನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಬಂದಿದ್ದೆನು. 5 ಗಾಂಜಾ ಗಿಡಗಳು ಇದ್ದವು, ಅವುಗಳ ಪೈಕಿ 3 ಗಿಡಗಳಿಂದ ತಲಾ 5 ಗ್ರಾಂ, 1 ಗಿಡದಿಂದ 10 ಗ್ರಾಂ ಮತ್ತು ಇನ್ನೊಂದು ಗಿಡದಿಂದ 35 ಗ್ರಾಂ ಸ್ಯಾಂಪಲ್ ತೆಗೆದರು. ನಂತರ ನಾನು ಸಹಿ ಮಾಡಿದ್ದೇನೆ. ಆದೇಶ ಪುಟದ ನಕಲನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ31 ಎಂದು ಗುರುತಿಸಲಾಯಿತು. ಸ್ಯಾಂಪಲ್ ಗಾಂಜಾವನ್ನು ಈಗ ನೋಡುತ್ತಿದ್ದು ಆ ಪ್ಯಾಕೇಟ್ ನಲ್ಲಿ ನನ್ನ ಸಹಿ ಇದೆ. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಶಾನೆ ಪಿ32 ರಿಂದ 39 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ :**

3. ಗಾಂಜಾ ಗಿಡ, ಗಾಂಜಾ ಸೊಪ್ಪಿನ ಬಗ್ಗೆ ಗೊತ್ತಾಗುತ್ತದೆ. ನಾನು ಅದನ್ನು ಉಪಯೋಗಿಸಿಲ್ಲ. ಒಂದೊಂದು ಗಿಡಗಳು ಎಷ್ಟು ತೂಕ ಇತ್ತು ಎಂದು ನನಗೆ ಗೊತ್ತಿಲ್ಲ. ಆ ದಿನ ನನ್ನ ಸಮಕ್ಷಮ ಗಾಂಜಾ ಗಿಡಗಳ ಸ್ಯಾಂಪಲ್ ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು ನೋಡಿದ ಗಿಡಗಳು ಗಾಂಜಾ ಗಿಡಗಳಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ
(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).
ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು